INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,21-28
Peer -Reviewed, Refereed Journal

# ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ – ಒಂದು ಸಮಾಜಶಾಸ್ತ್ರೀಯ ಅಧ್ಯಯನ

**ಡಾ.ಪೂರ್ಣಿಮ.ಬಿ.**[1]

ಕೃಷಿಯೇ ಭಾರತದ ಬೆನ್ನೆಲುಬು. ಭಾರತ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ವ್ಯವಸಾಯದ ಚಟುವಟಿಕೆಯ ಆಧಾರದ ಮೇಲೆಯೇ ರೈತರು ಜೀವನದ ಬಂಡಿಯನ್ನು ಸಾಗಿಸುತ್ತಿದ್ದಾರೆ. ಈ ಮೂಲಕ ದೇಶದ ಜನರಿಗೆ ಆಹಾರ ಭದ್ರತೆಯನ್ನು ಒದಗಿಸಿಕೊಡುತ್ತಿದ್ದಾರೆ. ವ್ಯವಸಾಯದ ಜೊತೆಯಾಗಿ ಪಶುಸಂಗೋಪನೆ, ತರಕಾರಿ ಮಾರಾಟ, ಕೃಷಿ ವಸ್ತುಗಳ ಶೇಖರಣೆ, ಕೃಷಿ ಸಲಕರಣೆಗಳ ಮಾರಾಟ, ಹೀಗಾಗಿ ಕೃಷಿಯಿಂದ ಶೇ 28ರಷ್ಟು ರಾಷ್ಟ್ರೀಯ ಆದಾಯಕ್ಕೆ ಕೊಡುಗೆಸಾಗುತ್ತಿದೆ. 1951ರಲ್ಲಿ ಶೇ 53% ರಷ್ಟು ಜಾನುವಾರುಗಳಿಗೆ ಮೇವನ್ನು ಪೂರೈಸುವ ಮೂಲಕ ಪಶುಸಂಗೋಪನೆಯು ಕೇಂದ್ರ ಬಿಂದುವಾಗಿದೆ. ರಾಷ್ಟ್ರದ ಸಂರಕ್ಷಣೆ ಮತ್ತು ಆಹಾರದ ಭದ್ರತೆಯನ್ನು ಒದಗಿಸಿಕೊಡುವಲ್ಲಿ ರೈತರ ಪಾತ್ರ ಅದ್ವಿತೀಯವಾದದ್ದು. ಮಹತ್ವಪೂರ್ಣ ಪಾತ್ರ ವಹಿಸುತ್ತಿರುವ ಕೃಷಿಯೂ ಹಾಗೂ ಕೃಷಿಯನ್ನು ಮುನ್ನಡೆಸುತ್ತಿರುವ ರೈತರು ಅನ್ನದಾತರು. ಹಲವಾರು ಸಮಸ್ಯೆಗಳಿಗೆ ಸಿಲುಕಿ ನಲುಗಿ ಹೋಗಿ ಆತ್ಮಹತ್ಯೆ ದಾರಿ ತುಳಿಯುತ್ತಿರುವುದು ನಾಗರೀಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಕರ್ನಾಟಕದಲ್ಲಿ ರೈತರ ಸರಣಿ ಆತ್ಮಹತ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಜನರಲ್ಲಿ ಹಾಗೂ ಸರ್ಕಾರ ನಡೆಸುತ್ತಿರುವ ರಾಜಕಾರಣಿಗಳಲ್ಲಿ ಆತಂಕ ತಂದೊಡ್ಡಿರುವುದರ ಜೊತೆಗೆ ರಾಜ್ಯದಲ್ಲಿ ಸೂತಕದ ಛಾಯೆ ಆವರಿಸಿದೆ. ರೈತರ ಆತ್ಮಹತ್ಯೆಗೆ ಸಾಲಭಾದೆಯೇ ಪ್ರಮುಖ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ ಇದರ ಜೊತೆಗೆ ರೈತರ ವೈಯಕ್ತಿಕ ಜೀವನದ ಹಲವಾರು ಸಂಕೀರ್ಣ ಸಮಸ್ಯೆಗಳು ಕಾರಣಗಳಾಗಿವೆ. ಉಪಯೋಗಕ್ಕೆ ಬಾರದ ವಿಷಯಗಳ ಬಗ್ಗೆ  ತಲೆಕೆಡಿಸಿಕೊಳ್ಳುವ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸಾಂಧರ್ಭಿಕವಾಗಿ ಒದಗಿ ಬರುವ ಹಬ್ಬ ಹರಿದಿನಗಳನ್ನು ಆಚರಿಸುವ ರೀತಿ, ಆರ್ಥಿಕ ಸವಾಲಾಗಿ ಸ್ವೀಕರಿಸಿ ಹಣವಿಲ್ಲದೆ ಇದ್ದರೂ ಸಾಲವನ್ನಾದರೂ ತಂದು ವಿಜ್ರಂಭಣೆಯಿಂದ ಆಚರಿಸಿ, ಹಬ್ಬ ಕಳೆದ ಕೆಲವೇ ದಿನಗಳಲ್ಲಿ ಸಾಲ ನೀಡಿದವರಿಗೆ ವಾಪಸ್ಸು ಹಣ ನೀಡಲಾಗದೆ ಅವಮಾನಕ್ಕೆ ಈಡಾಗಿ ಆತ್ಮಹತ್ಯೆಗೆ

---

1.**ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ**

ಶರಣಾಗಿರುವ ಉದಾಹರಣೆಗಳು ಉಂಟು. ಇನ್ನೂ ವಿವಾಹ, ಬೀಗರ ಔತಣಗಳಿಗೆ ಜನರ ಮೆಚ್ಚುಗೆಗೋಸ್ಕರ ನಿರೀಕ್ಷೆ ಮೀರಿ ಖರ್ಚು ಮಾಡುವ ಹವ್ಯಾಸ ಭಾರತದ ರೈತರನ್ನು ಪುನಃ ಬಡತನದ ಸ್ಥಿತಿಗೆ ತಳ್ಳಿದಂತಾಗುತ್ತಿದೆ. ಇವುಗಳ ಜೊತೆಗೆ ಕೆಟ್ಟ ಹವ್ಯಾಸಗಳಾದ ಮದ್ಯಪಾನ, ಧೂಮಪಾನ, ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳು, ಜೂಜಾಟಗಳಿಂದಾಗಿ ಜೀವನ ಜರ್ಜರಿತಗೊಂಡು ಹತಾಶೆಗೆ ಒಳಗಾಗಿ ಆತ್ಮಹತ್ಯೆಯಂತಹ ದುಸ್ಸಾಹಸಕ್ಕೆ ಕೈ ಹಾಕುತ್ತಿದ್ದಾರೆ. ಈ ಸಂದರ್ಭದಲ್ಲಿ ಖ್ಯಾತ ಫ್ರಾನ್ಸ್ ದೇಶದ ಸಮಾಜಶಾಸ್ತ್ರಜ್ಞ ಎಮಿಲಿ ಡುರ್ಖೈರ್ಂ(ಋಜ ಖಣುಋಜಜ) 1897ರಲ್ಲಿ ಪ್ರಕಟಿಸಿದ ಪ್ರಸಿದ್ಧ ಪುಸ್ತಕ ಆತ್ಮಹತ್ಯೆಯಲ್ಲಿ "ಜನರು ಸಮಾಜದಲ್ಲಿ ಆತ್ಮಹತ್ಯೆಗೆ ಒಳಗಾಗಲು ಸಾಮಾಜಿಕ ಸಂಗತಿಗಳೇ ಕಾರಣ" ಎಂಬ ವಿಶ್ಲೇಷಣೆಯು ಪ್ರಸ್ತುತ ಕರ್ನಾಟಕದಲ್ಲಿ ಜರುಗುತ್ತಿರುವ ರೈತರ ಸರಣಿ ಆತ್ಮಹತ್ಯೆಯಲ್ಲಿಯೂ ಕಂಡು ಬರುತ್ತಿವೆ.

**ಸಾಹಿತ್ಯ ಪರಾಮರ್ಶನ**

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು 1990ರ ನಂತರ ಹೆಚ್ಚಾಗಿ ತೀವ್ರ ಆತಂಕ ಸೃಷ್ಟಿಸಿವೆ. ಮೊದಲು ಇರಲಿಲ್ಲ ಎಂಬ ಅರ್ಥವಲ್ಲ, ಅಧ್ಯಯನದ ದೃಷ್ಟಿಯಿಂದ 1997ರ ಡಿಸೆಂಬರ್ ಮಾಹೆಯಲ್ಲಿ ಕರ್ನಾಟಕದ ಬೀದರ್ ಜಿಲ್ಲೆಯ ಸಿದ್ದೇಶ್ವರ ಗ್ರಾಮದ ಶಿವಲಿಂಗಪ್ಪ ಮೈದಾಳೆ ರವರ ಆತ್ಮಹತ್ಯೆ ಕರ್ನಾಟಕದಲ್ಲಿ ಮೊದಲ ಬಾರಿಗೆ ಬಹುದೊಡ್ಡ ಸುದ್ದಿಯಾಯಿತು.

ಡಾ. ವೀರೇಶ್ ಸಮಿತಿಯು (2002) ರೈತರ ಆತ್ಮಹತ್ಯೆಯು ಕೇವಲ ಆರ್ಥಿಕ ಕಾರಣಗಳಲ್ಲದೆ, ವೈಯಕ್ತಿಕ ಹಾಗೂ ಮಾನಸಿಕ ಕಾರಣಗಳು ಇವೆ ಎಂಬುದಾಗಿ ವರದಿ ಮಾಡಿದ್ದು, ಆದರೆ ಇದು ಆರ್ಥಿಕ ಅಂಶವನ್ನು ಸಂಪೂರ್ಣವಾಗಿ ಕಡೆಗಣಿಸಿದೆ.

ಅಸೂದಿ (1998) ಹಾಗೂ ವಾಸವಿ (1999) ರವರು ಜಾಗತೀಕರಣ ಹಾಗೂ ನವ ಉದಾರಿಕರಣದ ನೀತಿಗಳು ಕೃಷಿಯ ಖರ್ಚು ವೆಚ್ಚಗಳನ್ನು ಹೆಚ್ಚಿಸಿ ರೈತರನ್ನು ಸಾಲದ ಸುಳಿಗೆ ಸಿಲುಕಿಸಿವೆ ಎಂದಿದ್ದಾರೆ.

ಸಾಯಿನಾಥ್ ಪಿ. ಪ್ರಖ್ಯಾತ ಪತ್ರಕರ್ತರು ಮಹಿಳಾ ರೈತರು ಸಾಲದ ಸುಳಿಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದರೂ ಸರ್ಕಾರದ ಅಂಕಿ ಅಂಶಗಳಲ್ಲಿ ಪರಿಗಣಿಸಿಲ್ಲ ಎಂದು ತಮ್ಮ ವರದಿಗಳಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಮಲಾಕ್ಷಿ ಜಿ ತಡಸಾಡ್ (2015) "Farmers Suicide in Karnataka" ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಯನ್ನು ವಿಶ್ಲೇಷಿಸುವ ಕೆಲಸವಾಗಿದೆ. ಸಾಲ, ಬೆಳೆ ಅನಿಶ್ಚಿತತೆ, ಆರ್ಥಿಕ ಬೆಂಬಲದ ಕೊರತೆಗಳು ಕಾರಣಗಳಾಗಿವೆ ಎಂದು ವಿಶ್ಲೇಷಿಸಿದ್ದಾರೆ.

ಕೇಶವ ಎಸ್.ಆರ್. ರವರ(2016) "Farmers Suicide in Karnataka" ಎಂಬ ಸಂಶೋಧನಾ ಅಧ್ಯಯನದಲ್ಲಿ ಕೃಷಿ ಬಿಕ್ಕಟ್ಟಿನ ಹಿನ್ನೆಲೆ, ಹವಾಮಾನ ಸಾಲಗಳು ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳನ್ನು ಹೆಚ್ಚಿಸಿವೆ ಎಂದು ಗುರುತಿಸಿದ್ದಾರೆ. EAS Publisher (2024)ರಲ್ಲಿ ಪ್ರಕಟಿಸಿರುವ ಲೇಖನ Social and Economic Consequences of Farmers Suicides in Karnataka : Impacts on Rural Communities and Beyondದಲ್ಲಿ ಕರ್ನಾಟಕದಲ್ಲಿ 2013–2018ರ ಅವಧಿಯಲ್ಲಿ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಪತ್ತೆ ಹಚ್ಚಿ ಸಣ್ಣ ಮತ್ತು ಅಲ್ಪ ಜಮೀನುದಾರರು ಹೆಚ್ಚು ಆತ್ಮಹತ್ಯೆ ಮಾಡಿಕೊಂಡಿರುವುದರ ಹಿಂದೆ ಹಲವಾರು ಕಾರಣಗಳನ್ನು ಗುರುತಿಸಿದ್ದಾರೆ.

Mishra (ase – Control Study in Maharashtra (2006),Be here and Be here Report in Farmers Suicide in Vidarbha Province (2008),Gedela Small Case – Control Study in Andrapradesha (2008), Kale Small case - Control Study in Vidarbha Province (2011), Chhikara and Kodan Analysis of Secondary data on Farmers indebtedness in Haryana (2013),Kale Interview of Family members of 200 victims in vidarbha Province (2014) ಮೇಲ್ಕಂಡ ಅಂತರಾಷ್ಟ್ರೀಯ ವಿಮರ್ಶೆಗಳು ರೈತರ ಆತ್ಮಹತ್ಯೆಗೆ ಹಣಕಾಸಿನ ಒತ್ತಡಗಳೇ ಪ್ರಮುಖ ಕಾರಣಗಳೆಂದು ಪತ್ತೆಹಚ್ಚಿವೆ.

**ಸಂಶೋಧನಾ ಉದ್ದೇಶಗಳು**

ಪ್ರಸ್ತುತ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಈ ಸಂಶೋಧನಾ ಲೇಖನದ ಮುಖ್ಯ ಉದ್ದೇಶವು ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಯ ಸಮಸ್ಯೆಯ ಸ್ವರೂಪ ಕಾರಣಗಳು ಹಾಗೂ ಪರಿಣಾಮಗಳನ್ನು ವಿಶ್ಲೇಷಿಸಿ ತಡೆಗಟ್ಟುವ ಸೂಕ್ತ ನೀತಿ ಹಾಗೂ ಪರಿಹಾರ ಮಾರ್ಗಗಳನ್ನು ಸಲಹೆಗಳ ಮೂಲಕ ನೀಡುವುದಾಗಿದೆ.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಸಂಶೋಧನಾ ಲೇಖನವೂ ಖುದ್ದು ಭೇಟಿ ನೀಡಿ ದತ್ತಾಂಶಗಳನ್ನು ಪ್ರಾಥಮಿಕ ಮೂಲವಾದ ಕೃಷಿ ಆಯುಕ್ತರ ಕಚೇರಿಗೆ ಭೇಟಿ ನೀಡಿ ಸಂಗ್ರಹಿಸಲಾಗಿದೆ ಮಾಧ್ಯಮಿಕ ಮೂಲಗಳಾದ ಸಂಶೋಧನಾ ಲೇಖನಗಳು, ದಿನಪತ್ರಿಕೆಗಳು, ಪುಸ್ತಕಗಳು, ಓಅಖಃ ದಾಖಲೆಗಳಿಂದ ಸಂಗ್ರಹಿಸಿದ ದತ್ತಾಂಶಗಳ ಆಧಾರದ ಮೇಲೆ ವಿಶ್ಲೇಷಿಸಲಾಗಿದೆ.

**ಕೋಷ್ಟಕ – 1**

ಕರ್ನಾಟಕ ರಾಜ್ಯದ 31 ಜಿಲ್ಲೆಗಳ ಪೈಕಿ 2025 ಜನವರಿ ಮಾಹೆ ಯಿಂದ 2025 ಡಿಸೆಂಬರ್ 31 ರವರೆಗೆ ನಡೆದಿರುವ ಹೆಚ್ಚು ರೈತರ ಆತ್ಮಹತ್ಯೆ ಜರುಗಿರುವ ಜಿಲ್ಲೆಗಳ ಅಂಕಿ ಅಂಶಗಳನ್ನು ತೋರಿಸುವ ಕೋಷ್ಟಕ.

**ಕೋಷ್ಟಕ – 01**

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ರೈತರ ಆತ್ಮಹತ್ಯೆಯ ಸಂಖ್ಯೆ |
|---|---|---|
| 1 | ಹಾವೇರಿ | 297 |
| 2 | ಬೆಳಗಾವಿ | 259 |
| 3 | ಕಲುಬುರುಗಿ | 234 |
| 4 | ಧಾರವಾಡ | 125 |
| 5 | ಮೈಸೂರು | 190 |
| 6 | ಬೀದರ್ | 159 |
| 7 | ಹಾಸನ | 118 |

**ಕೋಷ್ಟಕ – 2**

ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಡೆದಿರುವ ರೈತರ ಆತ್ಮಹತ್ಯೆಯ ಸಂಖ್ಯೆಯನ್ನು ತೋರಿಸುವ ಕೋಷ್ಟಕ.

| ಕ್ರಮ ಸಂಖ್ಯೆ | ವರ್ಷಗಳು | ಸಂಖ್ಯೆ . |
|---|---|---|
| 1 | 2023-24 | 1254 |
| 2 | 2024-25 | 1178 |
| 3 | 2025-26 | 377 |
| | ಒಟ್ಟು | 2809 |

**ಕೋಷ್ಟಕ – 3**

ಭಾರತದಲ್ಲಿ 2019 ರಿಂದ 2023ರ ವರೆಗೆ ನಡೆದಿರುವ ರೈತರ ಆತ್ಮಹತ್ಯೆಯ ಸಂಖ್ಯೆಯನ್ನು ತೋರಿಸುವ ಕೋಷ್ಟಕ.

| ಕ್ರಮ ಸಂಖ್ಯೆ | ವರ್ಷಗಳು | ಸಂಖ್ಯೆ |
|---|---|---|
| 1 | 2019 | 10281 |
| 2 | 2020 | 10677 |
| 3 | 2021 | 10881 |
| 4 | 2022 | 11290 |
| 5 | 2023 | 10786 |
| 6 | 2024 | N/A |

ಮೂಲ : ರಾಷ್ಟ್ರೀಯ ಅಪರಾಧ ರೆಕಾರ್ಡ್ ಬ್ಯೂರೋ – ನವದೆಹಲಿ.

## ವಿಶ್ಲೇಷಣೆ ಮತ್ತು ಫಲಿತಾಂಶ

2025 ಜನವರಿ 1 ನೇ ದಿನಾಂಕದಿಂದ ಡಿಸೆಂಬರ್ 31–2025 ರವರೆಗೆ ಕರ್ನಾಟಕದ 8 ಜಿಲ್ಲೆಗಳಲ್ಲಿ ಗರಿಷ್ಠ ಪ್ರಮಾಣದ ರೈತರ ಆತ್ಮಹತ್ಯೆ ನಡೆದಿರುವುದು ಮೇಲ್ಕಂಡ ಕೋಷ್ಟಕ 1 ರಿಂದ ತಿಳಿಯಬಹುದಾಗಿದೆ. ಕೋಷ್ಟಕ 01 ರಲ್ಲಿ ಹೆಸರಿಸಿರುವ ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆಯ ಪ್ರಮಾಣ ಗಂಭೀರ ಮಟ್ಟವನ್ನು ತಲುಪಿರುವುದು ನಿಜಕ್ಕೂ ಆತಂಕ ತಂದೊಡ್ಡಿರುವ ವಿಷಯವಾಗಿದೆ. ಈ ಅಂಕಿ ಅಂಶಗಳು ಕೃಷಿ ಕ್ಷೇತ್ರದಲ್ಲಿ ಆರ್ಥಿಕ ಸಾಮಾಜಿಕ ಮತ್ತು ಮಾನಸಿಕ ಸಂಕಷ್ಟವನ್ನು ಪ್ರತಿಬಿಂಬಿಸುತ್ತವೆ.

ಕರ್ನಾಟಕದ ರಾಜ್ಯದ ಇತಿಹಾಸದಲ್ಲಿ ಹಾವೇರಿ ಜಿಲ್ಲೆಯ 2025ನೇ ವರ್ಷದಲ್ಲಿ ಅತ್ಯಧಿಕ ಸಂಖ್ಯೆಯ ರೈತರ ಆತ್ಮಹತ್ಯೆಗಳು ದಾಖಲಾಗಿದ್ದು ನಂತರ ಬೆಳಗಾವಿ(259) ಹಾಗೂ ಕಲಬುರುಗಿ (234) ಧಾರವಾಡ(195) ಮೈಸೂರು(190) ಬೀದರ್(159) ಹಾಸನ(118) ಹಾಗೂ ಮಂಡ್ಯ(115) ಜಿಲ್ಲೆಗಳು ಕ್ರಮವಾಗಿ ಮುಂದುವರಿದಿದೆ.

ಮೇಲೆ ತಿಳಿಸಿರುವ ಜಿಲ್ಲಾವಾರು ರೈತರ ಆತ್ಮಹತ್ಯೆಗಳಲ್ಲಿ ಸ್ಪಷ್ಟವಾಗಿ ಪ್ರಾದೇಶಿಕ ವ್ಯತ್ಯಾಸವನ್ನು ಗಮನಿಸಬಹುದು. ಹಾವೇರಿ, ಬೆಳಗಾವಿ, ಕಲಬುರಗಿ ಜಿಲ್ಲೆಗಳು ಅರೆಬಯಲು ಮತ್ತು ಬರಪೀಡಿತ ಪ್ರದೇಶಗಳಾಗಿದ್ದು ಇಲ್ಲಿ ಮಳೆಯ ಅನಿಶ್ಚಿತತೆ, ನೀರಾವರಿ ಸೌಲಭ್ಯಗಳ ಕೊರತೆ ಮತ್ತು ಮಣ್ಣಿನ ಗುಣಮಟ್ಟದ ಸಮಸ್ಯೆಗಳು ರೈತರ ಕೃಷಿಯನ್ನು ಅಸ್ಥಿರಗೊಳಿಸಿ ರೈತರ ಆದಾಯದಲ್ಲಿ ನಿರಂತರತೆ ಇಲ್ಲದೆ ಆರ್ಥಿಕ ಒತ್ತಡ ಹೆಚ್ಚಾಗಿ ರೈತರ ಆತ್ಮಹತ್ಯೆಗಳು ಹೆಚ್ಚಾಗಿರುವುದು ಕಂಡುಬಂದಿದೆ.

ರೈತರ ಆತ್ಮಹತ್ಯೆಗೆ ಅತ್ಯಂತ ಪ್ರಮುಖ ಕಾರಣ ಆರ್ಥಿಕ ಕಾರಣ ಖ್ಯಾತ ಸಮಾಜಶಾಸ್ತ್ರಜ್ಞ ಜರ್ಮನಿಯ ಕ್ರಾಂತಿಕಾರಿ ಪುರುಷ ಕಾಲ್ ಮಾರ್ಕ್ಸ್ ರವರ ಸಿದ್ಧಾಂತ ಆರ್ಥಿಕ ನಿರ್ಧಾರಕ ತತ್ವ ಇಲ್ಲಿ ನಿಜವೆನಿಸಿದೆ. ಸಾಲಬಾಧೆ, ಬೆಳೆನಷ್ಟ, ಕಡಿಮೆಬೆಲೆ, ಮಾರುಕಟ್ಟೆ ಅಸ್ಥಿರತೆ ಬೀಜ, ರಸಗೊಬ್ಬರ ಕೀಟನಾಶಕಗಳ ಬೆಲೆ ಏರಿಕೆ ಕಾರಣಗಳಾಗಿರುವುದು ಸ್ಪಷ್ಟವಾಗಿದೆ. ಹಾವೇರಿ ಬೆಳಗಾವಿಯಂತಹ ಜಿಲ್ಲೆಗಳಲ್ಲಿ ರೈತರು ವಾಣಿಜ್ಯ ಬೆಳೆಗಳ ಮೇಲೆ ಹೆಚ್ಚು ಅವಲಂಬನೆಯಾಗಿರುವುದರಿಂದ ಮಾರುಕಟ್ಟೆ

ಬೆಲೆಯ ಏರುಪೇರಿಗೆ ಈ ಜಿಲ್ಲೆಗಳ ರೈತರು ಸಂತ್ರಸ್ತರಾಗಿರುವುದು ಕಂಡು ಬಂದಿದೆ. ಈ ಜಿಲ್ಲೆಗಳಲ್ಲಿ ಸಾಲಬಾಧೆ ತೀರಿಸಲಾಗದೆ ಅನೇಕರು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆಗೆ ಕೊರಳು ಒಡ್ಡಿರುವುದನ್ನು ಪತ್ತೆ ಹಚ್ಚಲಾಗಿದೆ.

ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅವಲೋಕಿಸಿದಾಗ ರೈತರ ಆತ್ಮಹತ್ಯೆಗಳು ಕೇವಲ ಆರ್ಥಿಕ ಸಮಸ್ಯೆಯಿಂದ ಮಾತ್ರ ಜರಗುತ್ತಿಲ್ಲ ಸಾಮಾಜಿಕ ಒಂಟಿತನ ಕುಟುಂಬದ ಜವಾಬ್ದಾರಿಗಳ ಒತ್ತಡ, ಸಾಮಾಜಿಕ ಪ್ರತಿಷ್ಠೆಯ ಒತ್ತಡ, ಸಮುದಾಯದ ಬೆಂಬಲದ ಕೊರತೆಯನ್ನು ಒಳಗೊಂಡಿದೆ ಎಂಬುದು ಸ್ಪಷ್ಟವಾಗಿ ವೇದ್ಯವಾಗಿದೆ. ಗ್ರಾಮೀಣ ಸಮುದಾಯದಲ್ಲಿ ರೈತರು ಕುಟುಂಬದ ಮುಖ್ಯ ಆಧಾರವಾಗಿರುವುದರಿಂದ ಅವರ ವೈಫಲ್ಯವನ್ನು ವೈಯಕ್ತಿಕ ಸೋಲಾಗಿ ಪರಿಗಣಿಸಿಕೊಂಡು ಆತ್ಮಗೌರವಕ್ಕೆ ಧಕ್ಕೆ ಬಂತು ಎಂದು ಭಾವಿಸಿ ನಿರಾಶಾತ್ಮಕ ಆತ್ಮಹತ್ಯೆಗೆ ಬಲಿಯಾಗಿರುವುದು ಕಂಡು ಬಂದಿದೆ.

ಕೃಷಿಯ ಅನಿಶ್ಚಿತತೆ,ಸಾಲಗಾರರ ಒತ್ತಡ, ಕುಟುಂಬದ ನಿರೀಕ್ಷೆಗಳು ಹಾಗೂ ಸರ್ಕಾರದ ನೆರವು ತಡವಾಗುವುದು ರೈತರ ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಿ ಆತ್ಮಹತ್ಯೆಗಳು ಗರಿಷ್ಠ ಪ್ರಮಾಣದಲ್ಲಿ ಕರ್ನಾಟಕದಲ್ಲಿ ಹೆಚ್ಚುತ್ತಿವೆ. ಮೈಸೂರು ಮತ್ತು ಧಾರವಾಡದಂತಹ ತೀವ್ರ ನಗರೀಕರಣ ಪ್ರಕ್ರಿಯೆಗೆ ಒಳಗಾಗುತ್ತಿರುವ ಜಿಲ್ಲೆಗಳಲ್ಲಿಯೂ ಕೂಡ ರೈತರ ಆತ್ಮಹತ್ಯೆಗಳು ಹೆಚ್ಚಾಗಿರುವುದು ಕೇವಲ ಬರ ಅಥವಾ ಪ್ರಕೃತಿ ಕಾರಣಗಳಷ್ಟೇ ಅಲ್ಲ ಸಾಮಾಜಿಕ ಬದಲಾವಣೆಗಳು ಹಾಗೂ ಜೀವನ ಶೈಲಿಯ ಒತ್ತಡಗಳು ಕಾರಣಗಳಾಗಿರುವುದು ಕಂಡು ಬಂದಿದೆ. ದೇಶದಲ್ಲಿ ದಿನದಿಂದ ದಿನಕ್ಕೆ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿರುವುದನ್ನು ಕೋಷ್ಟಕದಲ್ಲಿ ಪರಿಶೀಲಿಸಬಹುದು. ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ, ಮಧ್ಯಪ್ರದೇಶಗಳಲ್ಲೂ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿದ್ದರೂ ಸಹ ಮಹಾರಾಷ್ಟ್ರ ರೈತರ ಆತ್ಮಹತ್ಯೆಯ ಅಂಕಿ ಅಂಶಗಳಲ್ಲಿ ಮೊದಲನೆಯ ಸ್ಥಾನದಲ್ಲಿದ್ದರೆ, ಕರ್ನಾಟಕ ಎರಡನೆಯ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ 10371 ರೈತರ ದಾಖಲೆಯ ರೈತರ ಆತ್ಮಹತ್ಯೆಗಳು ಜರುಗಿರುವುದು ದುರಂತವೇ ಸರಿ ಮಾಧ್ಯಮಿಕ ಮೂಲಗಳಿಂದ ದೊರೆತ ಮಾಹಿತಿಯಂತೆ ದೇಶದ ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ರೈತರ ಆತ್ಮಹತ್ಯೆ ವರದಿಯಾಗದೆ ಇರುವುದು ನಿಜಕ್ಕೂ ಸ್ವಾಗತಾರ್ಹವಾದದು.

## ಸಲಹೆಗಳು

ರೈತರ ಆತ್ಮಹತ್ಯೆಯು, ಸರಣಿ ಅನ್ನದಾತನ ಕೊಲೆಯಾಗುತ್ತಿದೆ ಎಂದೇ ಭಾವಿಸಬೇಕಾಗುತ್ತದೆ. ರೈತರ ಕಣ್ಣಿನಲ್ಲಿ ಹಾಗೂ ಹೃದಯದ ಅಭಿಮಾನ, ಸ್ವಾಭಿಮಾನಗಳೆರಡೂ ಉಳಿದಿಲ್ಲ ಹಾಗಾದರೆ ರೈತರ ಹಿತಾಸಕ್ತಿ ಕಾಯುವವರು ಯಾರು? ಈ ಅನ್ನದಾತನಿಗೆ ಬೆಂಬಲದ ಉಸಿರು ನೀಡುವವರು ಯಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ. ಈ ಸಂಶೋಧನಾ ಲೇಖನದ ಆಧಾರದ ಮೇಲೆ ಈ ಸಲಹೆಗಳನ್ನು ನೀಡಲಾಗಿದೆ.

1. ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ತುರ್ತಾಗಿ ಕೃಷಿ ತಜ್ಞರ ಸಮಿತಿಯನ್ನು ರಚಿಸಿ ದೀರ್ಘಕಾಲಿಕ ಮಾರ್ಗೋಪಾಯಗಳನ್ನು ಕಂಡುಹಿಡಿದು ಕೂಡಲೇ ಸರ್ಕಾರ ಅನುಷ್ಠಾನಗೊಳಿಸಿ ರೈತರ ಕೊರಳಿಗೆ ಬೀಳುತ್ತಿರುವ ಉರುಳನ್ನು ತಪ್ಪಿಸಬೇಕು, ಸಾಲ ಯೋಜನೆಯನ್ನು ಅತ್ಯಂತ ಸರಳಗೊಳಿಸಬೇಕು. ರೈತರು ಬೆಳೆಯುವ ಎಲ್ಲಾ ಬಗೆಯ ಬೆಳೆಗಳಿಗೆ ವಿಮೆ ದೊರೆಯುವಂತಾಗಬೇಕು.

2. ಕೃಷಿ ಕ್ಷೇತ್ರದಲ್ಲಿ ದಲ್ಲಾಳಿಗಳ ಪ್ರವೇಶವನ್ನು ಖಡಾಕಂಡಿತವಾಗಿ ನಿಷೇಧಿಸಬೇಕು ಪರೋಕ್ಷವಾಗಿ ಪ್ರವೇಶಿಸಿದರೆ ಕೂಡಲೇ ಶಿಕ್ಷೆ ವಿಧಿಸಬೇಕು ದಲ್ಲಾಳಿಗಳ ಹಿಡಿತದಿಂದ ಕೃಷಿ ಕ್ಷೇತ್ರವನ್ನು ದೂರಸರಿಸಬೇಕು.

3. ಕೃಷಿಯನ್ನೇ ರೈತರು ನಂಬುವುದರ ಜೊತೆಗೆ ಇತರೆ ಉಪಕಸುಬುಗಳನ್ನು ಅಂದರೆ ಪಶು ಪಾಲನೆ, ಸಂಗೋಪನೆ, ಕೆತ್ತನೆ, ತೋಟಗಾರಿಕೆ, ಕುರಿ, ಕೋಳಿ, ಹಂದಿ ಸಾಕಾಣಿಕೆ ಹಾಗೂ ಮಾರಾಟ, ಡೈರಿ ಕಟ್ಟುವಿಕೆ, ಹಾಲು ಮಾರಾಟ, ಇಂತಹ ಕಸುಬುಗಳನ್ನು ಅಳವಡಿಸಿಕೊಳ್ಳಲು ಸರ್ಕಾರ ವ್ಯವಸ್ಥಿತವಾಗಿ ತರಬೇತಿ ನೀಡಬೇಕು. ಪಶು ಪಾಲನೆಗೆ ಬೇಕಾಗುವ ಆಹಾರ ಪದಾರ್ಥಗಳನ್ನು ರೈತರೇ ಉತ್ಪಾದಿಸಿಕೊಳ್ಳುವಂತೆ ಮಾಡಿ ಖರ್ಚು ಕಡಿಮೆ ಮಾಡಿಕೊಂಡು ಆದಾಯ ಹೆಚ್ಚಾಗುವಂತೆ ಜಾಗೃತಿ ವಹಿಸುವಂತೆ ನೋಡಿಕೊಳ್ಳಬೇಕು.

4. ರೈತರು ಒಂದೇ ಬೆಳೆಗೆ ಆಸಕ್ತಿ ತೋರಿಸದೆ ಬಹುಬೆಳೆ ಹಾಗೂ ನಿರಂತರವಾಗಿ ಆದಾಯ ತರುವಂತಹ ಬೆಳೆಗಳತ್ತ ತಮ್ಮ ಚಿತ್ತ ಹರಿಸಬೇಕು.

5.ರೈತರಿಗೆ ಸರ್ಕಾರದಿಂದ ದೊರೆಯುವ ಸಬ್ಸಿಡಿಗಳು ನೇರವಾಗಿ ಮುಕ್ತವಾಗಿ ರೈತರಿಗೆ ದೊರೆಯುವಂತಾಗಬೇಕು ಸೂಕ್ತ ರೈತಪರ ಮಾರುಕಟ್ಟೆಗಳನ್ನು ಸ್ಥಾಪಿಸಬೇಕು. ಹೋಬಳಿ ಮಟ್ಟದಲ್ಲಿಯೂ ಮಾರುಕಟ್ಟೆಗಳು ಹಾಗೂ ಮಾರುಕಟ್ಟೆಯ ದರಗಳು ರೈತರಿಗೆ ಗೊತ್ತಾಗುವಂತೆ ಕ್ರಮ ಕೈಗೊಳ್ಳಬೇಕು.

6. ಕೃಷಿಗೆ ಸಂಬಂಧಿಸಿದ ಡಾ. ಸ್ವಾಮಿನಾಥನ್ ವರದಿಯನ್ನು ಕೂಡಲೇ ಜಾರಿಗೆ ತರಬೇಕು.

7. ಖಾಸಗಿ ಲೇವಾದೇವಿಗಾರರು ರೈತರ ಮೇಲೆ ವಿಧಿಸುವ ಬಡ್ಡಿಯ ಮೇಲೆ ಸರ್ಕಾರ ನಿಗಾ ವಹಿಸಬೇಕು ಪ್ರತಿ ತಾಲ್ಲೂಕುಗಳಲ್ಲೂ ಜಾಗೃತ ದಳ ರಚಿಸಿ ಖಾಸಗಿ ಲೇವಾದೇವಿಗಾರರ ವ್ಯವಹಾರಗಳ ಮೇಲೆ ಹದ್ದಿನ ಕಣ್ಣಿಟ್ಟಿರಬೇಕು. ಕೂಡಲೇ ಶಿಕ್ಷೆ ಜಾರಿಯಾಗುವಂತೆ ನೋಡಿಕೊಂಡು ಇಂತಹ ಲೇವದೇವಿ ಗಾರರ ಮೇಲೆ ಜಾರಿಯಾದ ಶಿಕ್ಷೆಯನ್ನು ಮಾಧ್ಯಮಗಳಲ್ಲಿ ದೊಡ್ಡದಾಗಿ ಪ್ರಕಟಿಸಬೇಕು. ಇದರಿಂದ ಬೇರೆ ಲೇವಾದೇವಿ ಗಾರರಿಗೆ ಭಯ ಹುಟ್ಟುವಂತೆ ಮಾಡಬೇಕು. ದೇಶದಲ್ಲಿ ಇದುವರೆಗೆ ಮೂರುವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಹೊಣೆಯನ್ನು ಬಹು ಪಾಲು ಖಾಸಗಿ ಲೇವಾದೇವಿಗಾರರೇ ಹೊರಬೇಕು ಇವರಿಗೆ ತಕ್ಕ ಶಿಕ್ಷೆಯಾಗಲೇಬೇಕು.

**ಉಪಸಂಹಾರ**

ಭಾರತ ಆತ್ಮಹತ್ಯೆಗಳ ದೇಶ ಎಂಬ ಹೆಸರಿಗೆ ನಾವು ಪಾತ್ರವಾಗಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ತಲೆತಗ್ಗಿಸುವ ಮಟ್ಟಕ್ಕೆ ಬಂದಿಳಿದ್ದಿದ್ದೇವೆ. ಇಂದಿನ ಜಾಗತೀಕರಣ, ಉದಾರಿಕರಣ, ಖಾಸಗೀಕರಣ ರೈತರ ಬದುಕನ್ನು ಹಸನು ಮಾಡುವ ಬದಲು ಮರಣಶಾಸನವನ್ನೇ ಬರೆಯುತ್ತಿವೆ. ಈ ಪ್ರಕ್ರಿಯೆಗಳು ಮುಂದುವರೆಯುತ್ತಿರುವ ಇಂದಿಗೂ ದೇಶದಲ್ಲಿ ಅರ್ಧಗಂಟೆಗೆ ಒಬ್ಬ ರೈತನಂತೆ ಪ್ರತಿದಿನ 46 ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವುದನ್ನು ಗಮನಿಸಿದರೆ ಆತಂಕದ ಛಾಯೆ, ದುಗುಡ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸುಮ್ಮನೆ ರೈತರ ಆತ್ಮಹತ್ಯೆಯ ವಿಚಾರದಲ್ಲಿ ಯಾರು ಅನ್ಯ ವಿಷಯಗಳನ್ನು ಚಿಂತಿಸದೆ, ರಾಜಕೀಯ ಮಾಡದೆ, ಸರ್ಕಾರಗಳತ್ತ ಬೊಟ್ಟು ತೋರದೆ ಭಾರತದ ಇವತ್ತಿನ ಜನಸಂಖ್ಯೆಯು 147 ಕೋಟಿ ತಲುಪುತ್ತಿರುವ ಇಂದಿನ ಸಮಯದಲ್ಲಿ ಈ 147 ಕೋಟಿ ಜನರು ರೈತರ ಆತ್ಮಹತ್ಯೆ ತಡೆಯಲು ಈ ಕ್ಷಣದಿಂದ ಪ್ರಯತ್ನಿಸಬೇಕು. ಇಲ್ಲದಿದ್ದರೆ ನಮ್ಮ ಅನ್ನದಲ್ಲಿ ನಾವೇ ವಿಷಬೆರೆಸಿ ಉಣಬಡಿಸಿದಂತಾಗುತ್ತದೆ.

## ಆಧಾರ ಗ್ರಂಥಗಳು

1. ಹೊಸತು, ಮೇ 2015
2. ಪ್ರಜಾವಾಣಿ, ಸೆಪ್ಟೆಂಬರ್ 15,2023
3. ವಿಜಯವಾಣಿ, ಆಗಸ್ಟ್ 20,2025
4. ವಿಜಯಕರ್ನಾಟಕ  ಡಿಸೆಂಬರ್ 25,2025
5. ಆಯುಕ್ತರ ಕಚೇರಿ ಕೃಷಿ ಇಲಾಖೆ ಬೆಂಗಳೂರು.